**ಓ ಎಸ್ ನಂ. 145/2023 ಡಿಡಬ್ಲ್ಯೂ 1**

**ಸಾಕ್ಷಿಯನ್ನು ದಿಃ 04.03.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ವಾದಿ ಪರ ಶ್ರೀ ಡಿ ಟಿ ವಿ ವಕೀಲರಿಂದಃ**

ನಿಶಾನೆ ಪಿ 9 ರಲ್ಲಿರುವ ಆರ್ ಟಿ ಸಿ ಯ ಪ್ರಕಾರ ಸರ್ವೆ ನಂ. 27/10 ರಲ್ಲಿನ 2 ಎಕರೆ 0.23 ಗುಂಟೆ ಜಮೀನು ನಿಂಗಮ್ಮ, ಪುಟ್ಟಮ್ಮ, ತಿಮ್ಮೇಗೌಡ, ಸಣ್ಣೇಗೌಡ, ಗೋವಿಂದೇಗೌಡ ಮತ್ತು ಸಾಕಮ್ಮರವರ ಹೆಸರುಗಳಲ್ಲಿ ಜಂಟಿಯಾಗಿ ದಾಖಲಾಗಿದೆ ಎಂದರೆ ಸರಿ. ಈ ಆಸ್ತಿಯು ಈಗಾಗಲೇ ಹಂಚಿಕೆಯಾಗಿ ನನಗೆ ಅದರಲ್ಲಿ 0.23 ಗುಂಟೆ ಜಮೀನನ್ನು ನೀಡಲಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಹೆಚ್ಚುವರಿಯಾಗಿ ಸದರಿ 0.23 ಗುಂಟೆ ಸೇರಬೇಕು ಎಂಬ ಬಗ್ಗೆ ದಾಖಲೆಗಳನ್ನು ಪಾಲುಪಾರಿಕತ್ತು ಮೂಲಕ ಮಾಡಿಕೊಂಡಿದ್ದೇನೆ. ಆ ಪಾಲುಪಾರಿಕತ್ತನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಮ್ಮ ನಡುವೆ ಯಾವುದೇ ಪಾಲುಪಾರಿಕತ್ತು ಆಗಿಲ್ಲ ಮತ್ತು ಅಂತಹ ಪಾಲುಪಾರಿಕತ್ತನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರಿಕೆಯಲ್ಲಿ ಮತ್ತು ಪ್ರತಿವಾದ ಪತ್ರದಲ್ಲಿ ಹೇಳಿರುವ ಸಂಗತಿಗಳು ನಿಜವಲ್ಲ ಹಾಗೂ ವಾದಿ ಮತ್ತು ಪ್ರತಿವಾದಿಗಳ ನಡುವೆ ಯಾವುದೇ ವಿಭಾಗ ಆಗಿಲ್ಲ ಎಂದರೆ ಸರಿಯಲ್ಲ. ಈಗ ನನಗೆ ತೋರಿಸಿದ ಛಾಯಾಚಿತ್ರಗಳಲ್ಲಿ ಮರಗಳನ್ನು ನಾವೇ ಕಡಿಸಿದ್ದೇವೆ. ಸದರಿ ಛಾಯಾಚಿತ್ರಗಳನ್ನು ನಿಶಾನೆ ಡಿ 1 ರಿಂದ 4 ಎಂದು ಗುರುತಿಸಲಾಯಿತು. ಮರ ಕಡಿದ ವಿಚಾರವಾಗಿ ವಾದಿ ತಿಮ್ಮೇಗೌಡರು ಪೊಲೀಸರಿಗೆ ದೂರು ನೀಡಿದ್ದರು ಎಂದರೆ ಸರಿ. ಆ ಮರಗಳು ಒಟ್ಟು ಕುಟುಂಬದ ಆಸ್ತಿಯಾಗಿದ್ದರೂ ಸಹ ಆ ಮರಗಳಿಂದ ಬಂದ ಆದಾಯವನ್ನು ನಾನು ವಾದಿಗೆ ನೀಡಿಲ್ಲ ಎಂದರೆ ಒಟ್ಟು ಕುಟುಂಬವು ಆಸ್ತಿತ್ವದಲ್ಲಿ ಇಲ್ಲವಾದ ಕಾರಣ ಮತ್ತು ಆ ಮರಗಳು ನನ್ನ ಜಮೀನಿನ ಮರಗಳಾಗಿರುವ ಕಾರಣ ವಾದಿಗೆ ಆದಾಯವನ್ನು

ಹಂಚುವ ಪ್ರಶ್ನೆ ಉದ್ಭವಿಸುವುದಿಲ್ಲ. ನಾನು ಹಾಗೂ ಉಳಿದ ಪ್ರತಿವಾದಿಗಳು ಪರಸ್ಪರ ಷರೀಕ್ಕಾಗಿ ವಾದಿಗೆ ಮೋಸ ಮಾಡಲು ದಬ್ಬಾಳಿಕೆಯಿಂದ ಮರಗಳನ್ನು ಕಡಿದಿದ್ದೇವೆ ಎಂದರೆ ಸರಿಯಲ್ಲ. ವಾದಿಯು ಹೆಣ್ಣು ಮಕ್ಕಳನ್ನು ಹೊಂದಿರುವ ಕಾರಣ ವಾದಿಯ ಸಹಾಯಕ್ಕೆ ಯಾರೂ ಬರುವುದಿಲ್ಲ ಎಂಬುದನ್ನು ಅರಿತು ಅವರು ಪೊಲೀಸರಿಗೆ ದೂರು ನೀಡಿದ್ದಾರೆ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳು ಯಾವುದೇ ಕಾಲದಲ್ಲಿಯೂ ಸಹ ನಮ್ಮ ಕುಟುಂಬದಲ್ಲಿ ವಿಭಾಗಕ್ಕೆ ಒಳಗಾಗಿಲ್ಲ ಮತ್ತು ಈಗಲೂ ಸಹ ನಮ್ಮನ್ನು ಹಾಗೂ ವಾದಿಯನ್ನು ಒಳಗೊಂಡ ಜಂಟಿ ಕುಟುಂಬ ಆಸ್ತಿತ್ವದಲ್ಲಿ ಇದೆ ಎಂದರೆ ಸರಿಯಲ್ಲ. ಹಾಗೊಮ್ಮೆ ವಿಭಾಗ ಆಗದಿದ್ದರೆ ಆ ಸಂಬಂಧ ಪಾಲುಪಟ್ಟಿ ಅಥವಾ ವಿಭಾಗ ಪತ್ರ ಇರುತ್ತಿತ್ತು ಎಂದರೆ ಸರಿಯಲ್ಲ. ಅಂತಹ ಪಾಲುಪಟ್ಟಿ ಅಥವಾ ವಿಭಾಗ ಪತ್ರ ಇಲ್ಲದೆ ಇರುವ ಕಾರಣ ಯಾವುದೇ ವಿಭಾಗ ಆಗಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ತನಗೆ ಸೇರಬೇಕಾದ ಭಾಗಾಂಶವನ್ನು ನೀಡುವಂತೆ ನಮ್ಮನ್ನು ಕೇಳಿದರೂ ಸಹ ನಾವು ನೀಡದೆ ಆತನ ಮೇಲೆ ದಬ್ಬಾಳಿಕೆ ನಡೆಸಿದ್ದರಿಂದ ಆತನು ಭಾಗಾಂಶ ಕೋರಿ ಈ ದಾವೆ ಹೂಡಬೇಕಾಗಿತ್ತು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**